# ಕಾದಂಬರಿ ಆದ ಪಾರು



ಪವಿತ್ರಾ ನಾಯ್ಕ್
ಉದಯದ 'ಕಾದಂಬರಿ'ಯ ನಾಯಕಿ

◆ **ನಿಮ್ಮ ಪರಿಚಯವನ್ನು ಹೇಳಬಹುದಾ?**

ನಮ್ಮ ತಂದೆ ಚಿಕ್ಕಮಗಳೂರು ಜಿಲ್ಲೆ ಕಡೂರಿನವರು. ನಾನು ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ಎಂಜಿನಿಯರಿಂಗ್ ಮಾಡಿದ್ದೇನೆ. 'ಎಲ್ಲಿ ನನ್ನ ವಿಳಾಸ' 'ಲಡ್ಡು', 'ಸ್ವೇಚ್ಛಾ' ಎಂಬ ಮೂರು ಸಿನಿಮಾಗಳ ನಂತರ ಕಿರುತೆರೆಗೆ ಬಂದೆ. 2018ರಿಂದ ಬಣ್ಣ ಹಚ್ಚುತ್ತಿದ್ದೇನೆ. ಕಿರುತೆರೆಯಲ್ಲಿ ಕಲರ್ಸ್‌ನ 'ರಕ್ಷಾ ಬಂಧನ'ದಲ್ಲಿ ಅವಕಾಶ ಸಿಕ್ಕಿತು. ನಂತರ ಝೀ ಕನ್ನಡದಲ್ಲಿ 'ಪಾರು' ಇದರ ಜೊತೆ ಉದಯದ 'ಕಾದಂಬರಿ'.

◆ **ಬೆಳ್ಳಿತೆರೆಯ ನಂತರ ಕಿರುತೆರೆಯ ಪಲ್ಲಟದ ಬಗ್ಗೆ ಏನು ಹೇಳುತ್ತೀರಿ?**

ಅಂತಹ ವ್ಯತ್ಯಾಸ ಏನೂ ಗೊತ್ತಾಗಲಿಲ್ಲ. ಕಿರುತೆರೆ ನನ್ನನ್ನು ಜನರ ಹತ್ತಿರ ಕರೆದುಕೊಂಡು ಹೋಗಿದೆ. ಮುಂದೆ ಸಿನಿಮಾದಲ್ಲೂ ಮಾಡುತ್ತೇನೆ. ಸದ್ಯ 'ಪಾರು' ಮತ್ತು 'ಕಾದಂಬರಿ' ಎರಡಕ್ಕೂ ಸಮಯ ಕೊಡಲೇಬೇಕು. ಎರಡೂ ಕಡೆ ಅನುಭವ ಆಗಬೇಕು. ಅದರಲ್ಲಿ ಇದೇ ಬೆಸ್ಟ್ ಎಂದು ಹೇಳಲು ಆಗದು. ಧಾರಾವಾಹಿಯನ್ನು ನಿತ್ಯವೂ ಮಾಡುವುದರಿಂದ ಹೆಚ್ಚು ಇಷ್ಟ ಆಗುತ್ತಿದೆ.

◆ **ಅನಿಶ್ಚಿತ ಉದ್ಯೋಗಕ್ಕಿಂತ ಎಂಜಿನಿಯರ್ ಆಗು ಎಂಬ ಒತ್ತಡ ಎದುರಾಗಲಿಲ್ಲವೇ?**

ಇಲ್ಲ. ಓದುವಾಗಲೇ ನನಗೆ ಸಿನಿಮಾ ಅವಕಾಶ ಸಿಕ್ಕಿತು. ಅಭಿನಯದ ಅಪೇಕ್ಷೆ ನನಗೆ ಇರಲಿಲ್ಲ. ಅದಾಗಿಯೇ ಬಂದಾಗ ಇದು ಸಾಧ್ಯವೇ ಎನ್ನುವ ಪ್ರಶ್ನೆ ಕಾಡಿದ್ದರಿಂದ ಭಯವಾಯಿತು. ಅಪ್ಪ– ಅಮ್ಮ ಇಬ್ಬರೂ ತುಂಬ ಖುಷಿಪಟ್ಟರು. ಅನೇಕರಿಗೆ ಪಯತ್ನಪಟ್ಟರೂ ಅವಕಾಶ ಸಿಗಲ್ಲ. ನಿನ್ನನ್ನೇ ಹುಡುಕಿ ಅವಕಾಶ ಬಂದಾಗ ಯಾಕೆ ಮಿಸ್ ಮಾಡ್ತೀಯಾ ಎಂದು ಪ್ರೋತ್ಸಾಹಿಸಿದ್ದರಿಂದ ಕಲಾವಿದಳಾಗುವ ಮನಸು ಮಾಡಿದೆ. ಅವರ ಒತ್ತಾಸೆಗೆ ಬಂದಿದ್ದರಿಂದ ನನಗಿಂತ ಅವರೇ ಹೆಚ್ಚು ಸಂತೋಷ ಪಡುತ್ತಾರೆ.

◆ **ಮೊದಲ ಅವಕಾಶ ಮತ್ತು ಮೊದಲ ದಿನದ ಕೆಲಸ ಹೇಗಿತ್ತು?**

ನನ್ನ ಅಣ್ಣನ ಜೊತೆ ಒಂದು ಕಡೆ ಹೋದಾಗ ಅಲ್ಲಿ ಸಿನಿಮಾ ನಿರ್ದೇಶಕರು– ನಿರ್ಮಾಪಕರು ಬಂದಿದ್ದರು. ಅವರು ತಮ್ಮ ಸಿನಿಮಾಕ್ಕೆ ನಾಯಕಿಯನ್ನು ಹುಡುಕುತ್ತಿದ್ದರು. ಆ ತಂಡಕ್ಕೆ ನಾನು ಎದುರಾದೆ, ನನಗೆ ಆಸಕ್ತಿ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಒಮ್ಮೆ ಪ್ರಯತ್ನ ಮಾಡಿ ಎಂದು ಒಂದು ದೃಶ್ಯವನ್ನು ಹೇಳಿಕೊಟ್ಟರು. ನಂತರ ಆ ಪಾತ್ರಕ್ಕೆ ಸೂಕ್ತವಾಗಿದ್ದೇನೆ ಎಂದು ನನ್ನನ್ನೇ ಆಯ್ಕೆ ಮಾಡಿದರು. ನಂತರ ಖುಷಿಯಿಂದಲೇ ಒಪ್ಪಿಕೊಂಡೆ. ಚಿತ್ರೀಕರಣ ವಿಜಯಪುರದ ತಾಳಿಕೋಟೆಯಲ್ಲಿ ಆರಂಭವಾಯಿತು. ಅದು ನನಗೆ ಚಿತ್ರೀಕರಣ ಎಂದು ಅನ್ನಿಸಲೇ ಇಲ್ಲ. ಯಾವುದೋ ಹಬ್ಬದಲ್ಲಿ ಭಾಗಿಯಾಗಿದ್ದೇನೆ ಎನ್ನುವ ಸಂಭ್ರಮವನ್ನು ನೀಡಿತು.

◆ **ಹಿಂದಿನ 'ಕಾದಂಬರಿ' ನಿಮ್ಮ ಹೊಸ ಯತ್ನಕ್ಕೆ ವರ ಆಗಬಹುದೋ ಶಾಪವಾವಾಗಬಹುದೋ?**

ವರವಾಗುತ್ತದೆ. ಮೊದಲು ನನಗೆ ಶೀರ್ಷಿಕೆ ಹೇಳಿದಾಗ ಮೊದಲು ಕಾಡಿದ್ದೇ ಮೊದಲ ಕಾದಂಬರಿ. ಹೆಸರು ತುಂಬ ಚೆನ್ನಾಗಿದೆ ಹಾಗಾಗಿ ಶಾಪ ಆಗಲೂ ಸಾಧ್ಯವೇ ಇಲ್ಲ. ಹೊಸ ಕಥಾ ಹಂದರಕ್ಕೆ ಯಾವ ಸಂಬಂಧವೂ ಇಲ್ಲ. ಕಥೆ ಮತ್ತು ಪಾತ್ರದ ಹರವನ್ನು ಮೊದಲ ದಿನ ಕೇಳಿದಾಗ ಧಾರಾವಾಹಿ ಶೀರ್ಷಿಕೆ ಅಂತಿಮ ಆಗಿರಲಿಲ್ಲ. ಇಲ್ಲಿ ಒಂದು ಹೆಣ್ಣು ಮನೆ ಜವಾಬ್ದಾರಿ ನಿರ್ವಹಿಸುತ್ತಾಳೆ. ಕಥೆ ಕೇಳಿದ ನಾನು ಇದು ಜನರಿಗೆ ಹತ್ತಿರವಾಗುತ್ತದೆ ಎಂದು ಭಾವಿಸಿದೆ. ಆ ಪಾತ್ರ ಕಷ್ಟ ಎನಿಸಲಿಲ್ಲ. ವಾಸ್ತವದಲ್ಲಿ ನಾನೇ ಅದನ್ನು ಮಾಡುತ್ತಿದ್ದೇನೆ ಎನ್ನುವ ಭಾವದಲ್ಲಿ ಮಾಡಿದ್ದೇನೆ. ಅಳುವ ಸನ್ನಿವೇಶ ಹೆಚ್ಚು ಬರುತ್ತವೆ. ಯಾವತ್ತೂ ನಾನು ಗ್ಲಿಸರಿನ್ ಹಚ್ಚಿ ಕಣ್ಣೀರು ಹರಿಸಿಲ್ಲ. ಕಾದಂಬರಿ ಪರಿಪಕ್ವ ವ್ಯಕ್ತಿತ್ವ. ಆಕೆ, ಸಮಯ ಸಂದರ್ಭಕ್ಕೆ ಸರಿಯಾಗಿ ಸ್ಪಂದಿಸುತ್ತಾಳೆ. ಪ್ರತಿ ಪೈಸೆಗೂ ಲೆಕ್ಕ ಬರೆದು ಖರ್ಚು ಮಾಡುವ ಜೀವನ. ಮನೆಯಲ್ಲಿ ಗಂಡುಮಗನಿದ್ದರೂ ಜವಾಬ್ದಾರಿಯನ್ನು ತೆಗೆದುಕೊಂಡಿಲ್ಲ. ಅಪ್ಪ ಕಾಣೆಯಾಗಿದ್ದಾರೆ. ಮಧ್ಯಮ ಕುಟುಂಬದ ನಿತ್ಯದ ಬದುಕಿನ ಜಂಜಾಟವೇ ಕಥೆಯ ಹೂರಣ. ನಾನು ಇಲ್ಲಿ ಗಾರ್ಮೆಂಟ್‌ನ ಉದ್ಯೋಗಿ.

◆ **ವೃತ್ತಿ ಜೀವನದಲ್ಲಿ ಹಿಂದಿನ ಮತ್ತು ಮುಂದಿನ ದಿನಗಳ ನಿರೀಕ್ಷೆ ಬಗ್ಗೆ ಹೇಳಿ...**

ಮೊದಲು ಎಲ್ಲರಂತೆಯೇ ನಾನೂ ಇದ್ದೆ. ಎಲ್ಲ ನಟ– ನಟಿಯರೂ ಹಾಗೆಯೇ ಇರುತ್ತಾರೆ. ಒಮ್ಮೆ ತೆರೆಯ ಮೇಲೆ ಕಾಣಿಸಿಕೊಂಡರೆ ಜನ ನೋಡುವ ದೃಷ್ಟಿಯೇ ಬದಲಾಗುತ್ತದೆ. ಆಗ ಕಲಾವಿದರಾದ ನಮ್ಮಲ್ಲಿ ಏನೇನೋ ಭಾವನೆಗಳು ಮೂಡಬಹುದು. ನನಗೆ ಜನರಿಗೆ ಇಷ್ಟವಾಗುವಂತೆ ಇರಬೇಕು. ಆದರ್ಶ ಪಾತ್ರದಂತೆ ನಿಜ ಜೀವನದಲ್ಲಿ ಒಳ್ಳೆಯ ಗುಣಗಳನ್ನು ಬೆಳಸಿಕೊಳ್ಳಬೇಕು ಎಂದುಕೊಂಡಿದ್ದೇನೆ. ಮುಂದಿನ ದಿನಗಳ ಬಗ್ಗೆ ಹೇಳಬೇಕು ಎಂದರೆ ನನ್ನ ತಲೆಯಲ್ಲಿ ತುಂಬ ಪಾತ್ರಗಳು ಇವೆ. ಚಿಕ್ಕ ಮಗುವಿನಿಂದ ಹಿಡಿದು ಅಜ್ಜಿಯತನಕ ನಾನಾಗಬೇಕು. ಅವು ಬೇರೆ ಬೇರೆ ಸವಾಲನ್ನು ನೀಡುವಂತೆ ಇರಬೇಕು.

■ **ರಾಘವೇಂದ್ರ ಕೆ.**